

ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟಗಾರ್ತಿ
ವೀರರಾಣಿ ಉಳ್ಳಾಲ ಅಬ್ಬಕ್ಕನ ಸಮಗ್ರ ಪರಿಚಯ



# ಅಬ್ಬಕ್ಕ ಸಂಕಥನ

ಪ್ರಧಾನ ಸಂಪಾದಕರು
ಡಾ. ಅಮೃತ ಸೋಮೇಶ್ವರ

ಸಂಪಾದಕರು
ಪ್ರೊ. ಎ.ವಿ. ನಾವಡ  ಡಾ. ವಾಮನ ನಂದಾವರ
ಶ್ರೀ ಭಾಸ್ಕರ ರೈ ಕುಕ್ಕುವಳ್ಳಿ  ಶ್ರೀಮತಿ ಬಿ.ಎಂ. ರೋಹಿಣಿ
ಡಾ. ಶೈಲಾ ಯು.  ಶ್ರೀ ಎಂ. ವಾಸುದೇವ ರಾವ್
ಶ್ರೀ ಡಿ.ಎಸ್. ರಾಘವ  ಅಬ್ದುಲ್ [illegible]

೨೦೧೧

ಪ್ರಕಾಶಕರು
ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ, ಉಳ್ಳಾಲ
[illegible] ಮಂಗಳೂರು, ದಕ್ಷಿಣ ಕನ್ನಡ

ಅಬ್ಬಕ್ಕ ಸಂಕಥನ

**ABBAKKA SANKATHANA**

A comprehensive volume of Ullala Veerarani Abbakka, the first Freedom fighter of India


Chief Editor
**Dr. Amritha Someshwar**

Editors
**Prof. A.V. Navada**
**Dr. Vamana Nandavara**
**Sri Bhaskara Rai Kukkuvalli**
**Smt. B.M. Rohini**
**Dr. Shaila U.**
**Sri. M. Vasudeva Rao**
**Sri. D.N. Raghava**
**Abdul Aziz Haq**



Published by
**Veerarani Abbakka Utsava Samithi**
Appayya Mansion
Post : Permannur, Mangalore - 575 017
Dakshina Kannada
Tel. : 0824 2466957, 2212192
Mobile : 9880088333, 9449016616

First Impression : 2011

Pages : 380


© : Authors


Price : ₹ 500

Cover Design : Kalloor Nagesh

Type Designed and Printed at
[illegible]
[illegible] Mangalore - 575 001
[illegible]

V 214

# ಪೋರ್ಚುಗೀಸ್ ದಾಖಲೆಗಳಲ್ಲಿ ಎರಡನೆಯ ರಾಣಿ ಅಬ್ಬಕ್ಕ ದೇವಿ

■ ಡಾ. ಎನ್. ಶ್ಯಾಮ ಭಟ್

ಮಧ್ಯಯುಗೀನ ಕಾಲದ ದಕ್ಷಿಣಕನ್ನಡದ ಮುಖ್ಯ ಆಳರಸರ ಪೈಕಿ ಉಳ್ಳಾಲ ಅಥವಾ ಪುತ್ತಿಗೆ ಅಥವಾ ಮೂಡಬಿದ್ರೆಯ ಚೌಟರ ಮನೆತನ ಕೂಡಾ ಒಂದು. ಚೌಟರ ಅಧಿಕಾರವು ಮೊದಲು ಮಂಗಳೂರು ತಾಲೂಕಿನ ಉಳ್ಳಾಲದಲ್ಲಿ ಸ್ಥಾಪನೆಯಾಗಿ ಬಳಿಕ ಕ್ರಮವಾಗಿ ಪುತ್ತಿಗೆ ಹಾಗೂ ಮೂಡಬಿದ್ರೆಗೆ ಸ್ಥಳಾಂತರಗೊಂಡಿತು ಎಂದು ಹೇಳಲಾಗುತ್ತದೆ.[೧] ಈ ಸಾಮಂತ ವಂಶದ ಮೂಲ ಇನ್ನೂ ಒಗಟೇ ಆಗಿ ಉಳಿದಿದೆ. ಚೌಟ ವಂಶದವರು ದಕ್ಷಿಣ ಕನ್ನಡಕ್ಕೇ ಸೇರಿದವರು ಎಂದು ಗ್ರಾಮಪದ್ಧತಿಯನ್ನು ಆಧರಿಸಿ ಬಿ.ಎ. ಸಾಲೆತ್ತೂರ್ ಅವರು ಅಭಿಪ್ರಾಯ ಪಟ್ಟಿದ್ದಾರೆ.[೨] ಮೂಡಬಿದ್ರೆಯ ಚೌಟರು ಮೂಲದಲ್ಲಿ ಹಿಂದೂಗಳಾಗಿದ್ದರು ಮತ್ತು ಅವರಿಗೆ ಕುಲದೇವತೆಯಾಗಿದ್ದುದು ಉಳ್ಳಾಲದ ಸೋಮನಾಥ ದೇವರು; ಅನಂತರ ಅವರು ಜೈನ ಧರ್ಮವನ್ನು ಸ್ವೀಕರಿಸಿದರು ಎಂದು ಸಾಲೆತ್ತೂರು ಹೇಳುತ್ತಾರೆ.[೩] ಚೌಟರು ಹೊರಗಡೆಯಿಂದ, ಪ್ರಾಯಶಃ ಮೈಸೂರು ಕಡೆಯಿಂದ, ದಕ್ಷಿಣ ಕನ್ನಡಕ್ಕೆ ವಲಸೆ ಬಂದವರು ಎಂದು ಪಿ. ಗುರುರಾಜ ಭಟ್ ಬರೆದಿದ್ದಾರೆ.[೪] ಗಣಪತಿ ರಾವ್ ಐಗಳ್ ಮತ್ತು ಪಿ. ಗುರುರಾಜ ಭಟ್ಟರಂಥ ಇತಿಹಾಸಕಾರರು ದಕ್ಷಿಣ ಕನ್ನಡದ ಚರಿತ್ರೆಯ ಬಗ್ಗೆ ವ್ಯಾಪಕ ಸಂಶೋಧನೆಯನ್ನು ಮಾಡಿದ್ದು ಚೌಟರ ವಂಶಾವಳಿಯನ್ನು ನೀಡಿದ್ದಾರೆ. ಆದರೆ, ಈ ವಂಶದ ದೊರೆಗಳ ಕಾಲಕ್ರಮ ಚರಿತ್ರೆಗೆ ಸಂಬಂಧಿಸಿದಂತೆ ಈ ಇಬ್ಬರು ಇತಿಹಾಸಕಾರರು ನೀಡುವ ವಿವರಗಳು ಪರಸ್ಪರ ಹೊಂದಿಕೆಯಾಗುವುದಿಲ್ಲ.[೫] ಐಗಳ್ ಪ್ರಕಾರ, ಕ್ರಿ.ಶ. ೧೧೬೦ರಿಂದ ೧೧೭೯ರ ವರೆಗೆ ಆಳಿದ ತಿರುಮಲರಾಯ ಚೌಟ ಮೊದಲ ದೊರೆಯಾಗಿದ್ದರೆ, ಕ್ರಿ.ಶ. ೧೮೨೨ರಿಂದ ೧೮೩೩ರ ವರೆಗೆ ಆಳಿದ ಚಂದ್ರಶೇಖರ ಚನ್ನರಾಯ ಕೊನೆಯವನಾಗಿದ್ದನು. ಪಿ. ಗುರುರಾಜ ಭಟ್ ಹೇಳುವ ಪ್ರಕಾರ, ಚೌಟರು ೧೩೦೦ರ ಸುಮಾರಿಗೆ ಅಧಿಕಾರಕ್ಕೆ ಬಂದಿರಬಹುದು. ಗುರುರಾಜ ಭಟ್ಟರು ಚಿಕ್ಕರಾಜ ಒಡೆಯನ (೧೬೪೦)ವರೆಗೆ ಈ ಅರಸು ಮನೆತನದ ವಂಶಾವಳಿಯನ್ನು ನೀಡುತ್ತಾರೆ.[೬] ಐಗಳ್ ಪ್ರಕಾರ, ಈ ವಂಶದ ಸುಮಾರು ೨೫ ಅರಸರು ಆಳ್ವಿಕೆ ನಡೆಸಿದ್ದಾರೆ.[೭] ಕೆ.ವಿ. ರಮೇಶ್ ಹೇಳುವಂತೆ, ತುಳುನಾಡಿನ ಒಂದು ಸಣ್ಣ ಪ್ರದೇಶವನ್ನು ಚೌಟರು ೧೨ರಿಂದ ೧೮ನೇ ಶತಮಾನದವರೆಗೆ ಆಳಿದ್ದರು.[೮] ಆಳುಪರು, ಹೊಯ್ಸಳರು, ವಿಜಯನಗರ ಅರಸರು, ಕೆಳದಿ ಅಥವಾ ಇಕ್ಕೇರಿಯ ನಾಯಕರು, ಹೈದರಾಲಿ, ಟಿಪ್ಪು ಸುಲ್ತಾನ್ ಮುಂತಾದ ರಾಜರುಗಳ ಅಡಿಯಲ್ಲಿ ಸಾಮಂತರಾಗಿ ಚೌಟರು ಈ ಪ್ರದೇಶದ ಆಳ್ವಿಕೆ ನಡೆಸುತ್ತಿದ್ದರು. ವಿಜಯನಗರದ ದೊರೆಗಳ ವಿರುದ್ಧ ೧೩೯೮ರಲ್ಲಿ ಚೌಟರು ತಿರುಗಿಬಿದ್ದರು ಮತ್ತು ಅದು ಒಂದು ನಿಷ್ಫಲ ಯತ್ನವಾಗಿತ್ತು ಎಂಬುದು ಉಲ್ಲೇಖನೀಯ ಸಂಗತಿ.[೯]

ದಕ್ಷಿಣ ಕನ್ನಡದ ಚರಿತ್ರೆಯಲ್ಲಿ ಎರಡನೇ ಅಬ್ಬಕ್ಕ ದೇವಿಯ (೧೫೪೪ - ೧೫೮೨) ಪಾತ್ರವೇನು ಹಾಗೂ ಗೋವಾವನ್ನು ಕೇಂದ್ರವಾಗಿರಿಸಿಕೊಂಡು ೧೫೧೦ರಿಂದ ೧೯೬೧ರ ವರೆಗೆ ವಸಾಹತುಶಾಹಿ ಆಳ್ವಿಕೆ ನಡೆಸಿದ ಪೋರ್ಚುಗೀಸರ ಜೊತೆ ಆವಳ ಸಂಬಂಧ ಯಾವ ರೀತಿ ಇತ್ತು ಎಂಬುದನ್ನು ಪರಿಶೀಲಿಸುವುದು ಪ್ರಸ್ತುತ ಪ್ರಬಂಧದ ಉದ್ದೇಶ. ಎರಡನೇ ಅಬ್ಬಕ್ಕ ದೇವಿಯು ಪೋರ್ಚುಗೀಸರಿಗೆ ಕಪ್ಪ ಕೊಡಲು ನಿರಾಕರಿಸಿ ಅವರೊಡನೆ ಹೋರಾಡಿದವಳಾದುದರಿಂದ ಬಹುಶಃ ದಕ್ಷಿಣ ಕನ್ನಡದ ಅತ್ಯಂತ ಜನಪ್ರಿಯ ರಾಣಿಯಾಗಿದ್ದಳು. ಅವಳು ಸೋಲೊಪ್ಪ ಬೇಕಾಯಿತಾದರೂ ದಂತಕತೆಯೇ ಆಗಿ ಜನಮಾನಸದಲ್ಲಿ ಉಳಿದುಕೊಂಡಳು. ಆದ್ದರಿಂದ ತುಳುನಾಡಿನ ಯಕ್ಷಗಾನದಂಥ ಜನಪ್ರಿಯ ಕಲೆಗಳು, ಜನಪದ ಸಾಹಿತ್ಯ, ಭೂತದ ಕೋಲ ಮುಂತಾದೆಡೆ ಅಬ್ಬಕ್ಕ ದೇವಿಯ ಸಾಧನೆಗಳ ಉಲ್ಲೇಖ ಬರುತ್ತದೆ.[೧೦] ರಾಣಿ ಅಬ್ಬಕ್ಕಳನ್ನೇ ವಸ್ತುವಾಗಿ ಹೊಂದಿದ ಒಂದು ಐತಿಹಾಸಿಕ ಕಾದಂಬರಿಯೂ ಇತ್ತೀಚೆಗೆ ಬಂದಿದೆ.[೧೧] ಪಿ. ಗುರುರಾಜ ಭಟ್ಟರು ಸೂಚಿಸಿರುವಂತೆ, ರಾಣಿ ಎರಡನೇ ಅಬ್ಬಕ್ಕ ದೇವಿ ಉಳ್ಳಾಲದಲ್ಲಿ ಆಳ್ವಿಕೆ ನಡೆಸಿದರೆ, ಲೋಕಾದೇವಿ ಪುತ್ತಿಗೆಯಲ್ಲಿ ಆಳಿದಳು. ಅವರಿಬ್ಬರೂ ೧೫೪೪ರಿಂದ ಆರಂಭಿಸಿ ಏಕಕಾಲದಲ್ಲಿಯೇ ಆಡಳಿತ ನಡೆಸಿದರು. ಈ ಕಾಲಘಟ್ಟದ ಬಳಿಕ ಚೌಟರ ಸಂಸ್ಥಾನ ವಿಭಾಗವಾಗಿ ಉಳ್ಳಾಲ ಮತ್ತು ಪುತ್ತಿಗೆ ಹೀಗೆ ಎರಡು ಪ್ರತ್ಯೇಕ ರಾಜಧಾನಿಗಳಿಂದ ಆಡಳಿತ ನಡೆಸುವಂತಾಗಿರಬೇಕು.[೧೨]

ಕರ್ನಾಟಕದ ಕರಾವಳಿಯಲ್ಲಿ ತಮ್ಮ ನಿಯಂತ್ರಣವನ್ನು ಸಾಧಿಸುವುದರತ್ತ ಪೋರ್ಚುಗೀಸರು ಗಣನೀಯ ಆಸಕ್ತಿಯನ್ನು ತೋರಿಸಿದ್ದರು. ವ್ಯಾಪಾರ ವೃದ್ಧಿ ಹಾಗೂ ಕ್ರೈಸ್ತ ಧರ್ಮಪ್ರಸಾರ ಅವರ ಪ್ರಮುಖ ಉದ್ದೇಶಗಳಾಗಿದ್ದವು.[೧೩] ಭೌಗೋಳಿಕ, ರಾಜಕೀಯ ಹಾಗೂ ವ್ಯಾಪಾರದ ಅವಕಾಶಗಳ ಕಾರಣದಿಂದ ಕರಾವಳಿ ಪ್ರದೇಶವನ್ನು ಯಾವ ಆಡಳಿತಗಾರನೂ ಕಡೆಗಣಿಸುವಂತಿರಲಿಲ್ಲ. ಸಹಜವಾಗಿಯೇ ಪೋರ್ಚುಗೀಸರ ಕಣ್ಣು ಇಲ್ಲಿಯ ಆಡಳಿತಗಾರರ ಮೇಲೆ, ಭತ್ತದ ಮೇಲೆ, ಸಾಂಬಾರ ಪದಾರ್ಥಗಳ ಮೇಲೆ ಹಾಗೂ ಕಾಡುತ್ಪತ್ತಿಗಳ ಮೇಲೆ ನೆಟ್ಟಿತ್ತು. ಭಟ್ಕಳದ ಆಳರಸ ತಮ್ಮೊಂದಿಗೆ ಮಾತ್ರ ಕಾಳುಮೆಣಸಿನ ವ್ಯಾಪಾರ ಮಾಡುವಂತೆ ಹಾಗೂ ವಾರ್ಷಿಕ ೧೫೦೦ ಚೀಲಗಳಷ್ಟು ಅಕ್ಕಿಯನ್ನು ತಮಗೆ ಕಪ್ಪವಾಗಿ ನೀಡುವಂತೆ ೧೫೦೨ರಷ್ಟು ಹಿಂದೆಯೇ ಪೋರ್ಚುಗೀಸರು ಒಪ್ಪಂದ ಮಾಡಿಕೊಂಡಿದ್ದರು.[೧೪] ಅಫೋನ್ಸ್ ಡಿ ಅಲ್ಬುಕರ್ಕ್ (೧೫೦೯-೧೫೧೫) (Afonso de Albuquerque) ಕಾಲದಿಂದಲೇ ಪೋರ್ಚುಗೀಸರು ಮಂಗಳೂರಿನ ಸಂಪರ್ಕವನ್ನು ಹೊಂದಿದ್ದರು. ಅನೇಕ ಸಂದರ್ಭಗಳಲ್ಲಿ ಪೋರ್ಚುಗೀಸರ ಆಕ್ರಮಣ, ಲೂಟಿ ಹಾಗೂ ಕಗ್ಗೊಲೆಗಳಿಗೆ ಮಂಗಳೂರು ಒಳಗಾಗಿತ್ತು. ೧೫೩೦ರಲ್ಲಿ ಪೋರ್ಚುಗೀಸರು ಅಡ್ಮಿರಲ್ ಡಿಯಾಗೋ ಡಾ ಸಿಲ್ವೇರಾ (Diago da Silveiral) ಮುಂದಾಳುತ್ವದಲ್ಲಿ ಮಂಗಳೂರಿಗೆ ಮುತ್ತಿಗೆ ಹಾಕಿದ್ದರು. ಮಂಗಳೂರಿನ ಶೆಟ್ಟಿಯಂಥ ವ್ಯಾಪಾರಿಗಳು ರಹಸ್ಯವಾಗಿ ಪೋರ್ಚುಗೀಸರ ವೈರಿಯಾಗಿದ್ದ ಕಲ್ಲಿಕೋಟೆಯ ಜಮೊರಿನ್ (Zamorin) ಜೊತೆ ವ್ಯವಹಾರ ನಡೆಸುತ್ತಿದ್ದುದೇ ಇದಕ್ಕೆ ಕಾರಣವಾಗಿತ್ತು.

ಈ ದಾಳಿಯಲ್ಲಿ ಶೆಟ್ಟಿ ಮೃತನಾದ ಮತ್ತು ಪೋರ್ಚುಗೀಸರು ದೊಡ್ಡ ಕೊಳ್ಳೆಯನ್ನೇ ಪಡೆದರು. ೧೫೩೨ರಲ್ಲಿ ಅದೇ ಅಡ್ಮಿರಲ್‌ನ ನೇತೃತ್ವದಲ್ಲಿ ಮತ್ತೊಮ್ಮೆ ಮಂಗಳೂರಿನ ಮೇಲೆ ಮುತ್ತಿಗೆ ಹಾಕಲಾಯಿತು.[೧೫] ಪೋರ್ಚುಗೀಸರ ಮಿತ್ರನಾಗಿದ್ದ ಶೆಟ್ಟಿ ಎಂಬಾತ ಗೋವಾದಿಂದ ಕೊಮೊರಿನ್ (Comorin) ವರೆಗಿನ ಇಡೀ ಪಶ್ಚಿಮ ಕರಾವಳಿಯಲ್ಲೇ ಅತ್ಯಂತ ಶ್ರೀಮಂತನಾಗಿದ್ದ ಎಂದು ಬಿ.ಎಸ್. ಶಾಸ್ತ್ರಿ ಬರೆದಿದ್ದಾರೆ.[೧೬] ೧೫೬೮ - ೬೯ರ ಅವಧಿಯಲ್ಲಿ ಪೋರ್ಚುಗೀಸರು ಮಂಗಳೂರು, ಹೊನ್ನಾವರ ಹಾಗೂ ಬಸ್ರೂರುಗಳಲ್ಲಿ ಕೋಟೆಗಳನ್ನು ಕಟ್ಟಿದರು. ೧೬೫೦ರಲ್ಲಿ ಇಕ್ಕೇರಿಯ ಶಿವಪ್ಪ ನಾಯಕ ಅವುಗಳನ್ನು ವಶಪಡಿಸಿಕೊಳ್ಳುವವರೆಗೆ ಪೋರ್ಚುಗೀಸರು ಆ ಕೋಟೆಗಳನ್ನು ಉಪಯೋಗಿಸುತ್ತಿದ್ದರು. ಪೋರ್ಚುಗೀಸರು ೧೫೬೮ರಲ್ಲಿ ಮಂಗಳೂರಿನಲ್ಲಿ ಒಂದು ಕೋಟೆ ಕಟ್ಟಿದ್ದರು. ಒಟ್ಟಾರೆಯಾಗಿ ಪೋರ್ಚುಗೀಸರು ೧೬೬೩ರ ವರೆಗೂ ಕೆಳದಿಯ ನಾಯಕರೊಂದಿಗೆ ರಾಜಕೀಯವಾಗಿ ಮತ್ತು ಆರ್ಥಿಕವಾಗಿ ತೊಡಗಿಸಿಕೊಂಡಿದ್ದರು. ಪೋರ್ಚುಗೀಸರು ಗೋವಾದಲ್ಲಿ ಆಡಳಿತಗಾರರಾಗಿದ್ದಷ್ಟು ಸಮಯ ಕರಾವಳಿ ಕರ್ನಾಟಕದಲ್ಲಿ ಅವರ ವ್ಯಾಪಾರ ವಹಿವಾಟು ಮುಂದುವರಿಯಿತು.

ಎರಡನೇ ಅಬ್ಬಕ್ಕ ದೇವಿಯು ಪದೇ ಪದೇ ಪೋರ್ಚುಗೀಸರಿಗೆ ಕಪ್ಪ ಕೊಡಲು ನಿರಾಕರಿಸುತ್ತಿದ್ದುದರಿಂದ ಅವರ ನಡುವೆ ಒಳ್ಳೆಯ ಸಂಬಂಧವಿರಲಿಲ್ಲ. ಉಳ್ಳಾಲದ ರಾಣಿ ಎರಡನೇ ಅಬ್ಬಕ್ಕ ದೇವಿಯಿಂದ ಕಪ್ಪವನ್ನು ವಸೂಲು ಮಾಡಲು ೧೫೫೬ರಲ್ಲಿ ಪೋರ್ಚುಗೀಸ್ ದಳಪತಿ ಅಲ್ವಾರೊ ಡಿ ಸಿಲ್ವೇರಾ ನೇತೃತ್ವದಲ್ಲಿ ಗೋವಾದಿಂದ ಯುದ್ಧನೌಕೆಯೊಂದನ್ನು

ಉಳ್ಳಾಲಕ್ಕೆ ಕಳುಹಿಸಲಾಯಿತು. ಆವನು ಮಂಗಳೂರಿನ ಮೇಲೆ ದಾಳಿ ಮಾಡಿ ಅಸಂಖ್ಯ ಜನರನ್ನು ಕೊಂದು ಪಟ್ಟಣದ ಒಂದು ಭಾಗವನ್ನೇ ಉರಿಸಿದನು ಹಾಗೂ ಒಂದು ದೇವಸ್ಥಾನವನ್ನು ಲೂಟಿ ಮಾಡಿದನು. ಕೊನೆಗೆ ರಾಣಿ ಅಬ್ಬಕ್ಕ ರಾಜಿ ಮಾಡಿಕೊಳ್ಳಬೇಕಾಯಿತು.[೧೭]

೧೫೫೮ರಲ್ಲಿ ಪೋರ್ಚುಗೀಸರು ಮಲಬಾರ್ ಕರಾವಳಿಯ ಉಸ್ತುವಾರಿಯನ್ನು ಲೂಯಿ ಡಿ ಮೆಲ್ಲೋಗೆ ನೀಡಿದರು. ಅದೇ ವರ್ಷ ಮಂಗಳೂರಿನ ಬಂದರಿನಲ್ಲಿ ಅವನು ಕಣ್ಣಾನೂರಿನ ರಾಜನಿಗೆ ಸೇರಿದ ಹಡಗೊಂದನ್ನು ಕಂಡು ಅದರ ಮೇಲೆ ಆಕ್ರಮಣ ಮಾಡಿದನು. ಆದರೆ ಮಂಗಳೂರು ನಿವಾಸಿಗಳ ಬೆಂಬಲದಿಂದಾಗಿ ಪೋರ್ಚುಗೀಸರ ದಾಳಿಯನ್ನು ಸಮರ್ಥವಾಗಿ ಎದುರಿಸಲು ರಾಣಿ ಅಬ್ಬಕ್ಕನಿಗೆ ಸಾಧ್ಯವಾಯಿತು. ಮಂಗಳೂರಿನವರ ಈ ವರ್ತನೆಯಿಂದ ಕ್ರುದ್ಧನಾದ ಲೂಯಿ ಡಿ ಮೆಲ್ಲೊ ನಗರವನ್ನೇ ಬೂದಿ ಮಾಡಿ ಸಿಕ್ಕ ಸಿಕ್ಕವರನ್ನು ಕೊಂದು ಹಾಕಿದನು.[೧೮]

ಕೆಲ ವರ್ಷಗಳ ಬಳಿಕ, ಪೋರ್ಚುಗೀಸರಿಗೆ ಕಪ್ಪ ಕೊಡುವುದನ್ನು ಎರಡನೇ ಅಬ್ಬಕ್ಕ ದೇವಿ ಪುನಃ ನಿಲ್ಲಿಸಿದಳು.

ಮುಂದೆ ನಡೆಯಬಹುದಾದ ಸಂಘರ್ಷದಲ್ಲಿ ರಾಣಿಗೆ ಸಹಾಯ ಮಾಡದಂತೆ ಆಕೆಯ ಮಿತ್ರರನ್ನು ಮನವೊಲಿಸುವ ಉದ್ದೇಶದಿಂದ ೧೫೬೭ರಲ್ಲಿ ಪೋರ್ಚುಗೀಸ್ ವೈಸರಾಯ್ ಒಂದು ಯುದ್ಧನೌಕೆಯೊಂದಿಗೆ ಜಾವೊ ಪಿಕ್ಸೋಟೋ (Joao Peixoto)ನನ್ನು ಕಳುಹಿಸಿದ. ಆದರೆ ಆತ ನೇರವಾಗಿ ಪಟ್ಟಣವನ್ನು ವಶಪಡಿಸಿಕೊಂಡು ಆಸ್ಥಾನವನ್ನೇ ಪ್ರವೇಶಿಸಿದ. ರಾಣಿಯ ಜನರು ಕೂಡಲೇ ಪೋರ್ಚುಗೀಸರ ನೌಕೆಯ ಮೇಲೆ ಆಕ್ರಮಣ ಮಾಡಿ ಪಿಕ್ಸೋಟೋ ಸಹ ಸೇರಿದಂತೆ ಸುಮಾರು ಎಪ್ಪತ್ತು ಪೋರ್ಚುಗೀಸರನ್ನು ಕೊಂದರು. ಉಳಿದವರು ಹಿಂಜರಿದು ತಮ್ಮ ಹಡಗುಗಳಿಗೆ ಹೋದರು. ಈ ಸೋಲಿನ ಬಳಿಕ ಇನ್ನಷ್ಟು ಸೈನಿಕರನ್ನು ಕಳುಹಿಸಿ ರಾಣಿಯನ್ನು ಸೋಲಿಸಲು ಪೋರ್ಚುಗೀಸ್ ವೈಸರಾಯ್ ತೀರ್ಮಾನಿಸಿದನು.[೧೯]

ಎರಡನೇ ಅಬ್ಬಕ್ಕ ದೇವಿಯನ್ನು ಸೋಲಿಸಲು ಪೋರ್ಚುಗೀಸರು ೧೫೬೮ರ ಜನವರಿ ನಾಲ್ಕರಂದು ಉಳ್ಳಾಲದ ಮೇಲೆ ಆಕ್ರಮಣ ಮಾಡಿದರು. ಉಳ್ಳಾಲದ ಮೇಲೆ ಆಕ್ರಮಣ ಮಾಡುವ ಹೊಣೆಯನ್ನು ವೈಸರಾಯನ ಭಾವನಾಗಿದ್ದ ಆಂಟೋನಿಯೊ ಪೆರೇರಾನಿಗೆ (Antonio Pereira) ವಹಿಸಲಾಗಿತ್ತು. ಅವನಿಗೆ ೫೦೦ ಸೈನಿಕರನ್ನು ನೀಡಲಾಗಿತ್ತು. ಉಳಿದವರನ್ನು ಆರು ದಳಗಳಾಗಿ ವಿಂಗಡಿಸಲಾಗಿತ್ತು. ರಾತ್ರಿಯಾಗುವ ವೇಳೆಗೆ ಬಂದರಿನಲ್ಲಿಳಿದು ಸೈನಿಕರು ಸನ್ನದ್ಧರಾಗಿ ನಿಂತರು. ಆದರೆ ಪೋರ್ಚುಗೀಸರ ಸೈನ್ಯದಲ್ಲಿ ಸರಿಯಾದ ಶಿಸ್ತು ಇರಲಿಲ್ಲ. ರಾತ್ರಿಯ ಹೊತ್ತಿನಲ್ಲಿ ದಳಪತಿಗಳಲ್ಲಿ ಒಬ್ಬನಾದ ಫ್ರಾನ್ಸಿಸ್ಕೋ ಮಸ್ಕರೇನ್ಹಸ್ ಮತ್ತು ಅವನ ಸೈನಿಕರು ತಮ್ಮ ಬಿಡಾರಗಳಲ್ಲಿ ದೊಂದಿಗಳನ್ನು ಹಾಗೂ ಕಂದೀಲುಗಳನ್ನು ಉರಿಸಿ ವಿನೋದಗೋಷ್ಠಿಗಳಲ್ಲಿದ್ದರು. ಇದನ್ನು ಗಮನಿಸಿದ ಉಳ್ಳಾಲದ ಸೈನಿಕರು ಪೋರ್ಚುಗೀಸರ ಮೇಲೆ ದಾಳಿ ಮಾಡಲು ತೀರ್ಮಾನಿಸಿದರು. ಸುಮಾರು ೨೦೦೦ದಷ್ಟು ಉಳ್ಳಾಲದ ಸೈನಿಕರು ಒಟ್ಟುಸೇರಿದರು. ಅವರಲ್ಲಿ ೫೦೦ರಷ್ಟು ಮಂದಿ ಏಕಕಾಲಕ್ಕೆ ಮಸ್ಕರ್ಹೇನಸ್‌ನ ಶಿಬಿರದ ಮೇಲೆ ಎರಗಿದರು. ಪೋರ್ಚುಗೀಸರಿಗೆ ತಮ್ಮ ಆಯುಧಗಳನ್ನು ಕೈಗೆತ್ತಿಕೊಳ್ಳಲು ಕೂಡ ಸಮಯ ಸಿಗಲಿಲ್ಲ. ಬಿಡಾರದ ಹೊರಗಿದ್ದ ೫೦ರಷ್ಟು ಪೋರ್ಚುಗೀಸ್ ಸೈನಿಕರು ಹತರಾದರು. ಆದರೂ ಪೋರ್ಚುಗೀಸರು ಸಾವರಿಸಿಕೊಂಡು ಶೌರ್ಯದಿಂದ ಹೋರಾಡಿದರು. ಈ ಹೋರಾಟದಲ್ಲಿ ಮಸ್ಕರೇನ್ಹಸ್‌ಗೆ ಐದು ಗಾಯಗಳಾದವು. ಕತ್ತಲಿನಲ್ಲಿ ಗೊಂದಲವೂ ಅವ್ಯವಸ್ಥೆಯೂ ಉಂಟಾಯಿತು. ಸೈನಿಕರು ಕತ್ತಲಲ್ಲಿ ಚೆಲ್ಲಾಪಿಲ್ಲಿಯಾಗಿ ಓಡಿದರು. ಶತ್ರು ಯಾರು ಮಿತ್ರ ಯಾರು ಎಂದು ಗೊತ್ತಾಗುತ್ತಿರಲಿಲ್ಲ. ಮಸ್ಕರೇನ್ಹಸ್‌ನ ಕೈಕೆಳಗಿದ್ದ ಸುಮಾರು ೬೦೦ ಸೈನಿಕರಲ್ಲಿ ಹೆಚ್ಚಿನವರು ಹತರಾದರು. ವೈಸರಾಯ್ ತಕ್ಷಣ ಮತ್ತೆ ೭೦ ಸೈನಿಕರನ್ನು ಕಳುಹಿಸಿದನು. ಈ ಯುದ್ಧದ ಸಂದರ್ಭದಲ್ಲಿ ನೌಕೆಗೆ ಹಿಂದಿರುಗುವಂತೆ ಗಣ್ಯರಲ್ಲೊಬ್ಬ ವೈಸರಾಯ್‌ಗೆ ಸಲಹೆ ನೀಡಿದನಾದರೂ ವೈಸರಾಯ್ ಲೆಕ್ಕಿಸದೆ ಯುದ್ಧಭೂಮಿಗೆ ಮುನ್ನುಗ್ಗಿದನು. ತಮಟೆಗಳ ಸದ್ದು ಕೇಳಿ ಶತ್ರುಗಳು ಹಿಮ್ಮೆಟ್ಟಿದರು. ಎರಡನೇ ಬಾರಿ ಉಳ್ಳಾಲದವರು ಮಿಂಚಿನ ದಾಳಿ ಮಾಡುವುದನ್ನು ತಪ್ಪಿಸಲಿಕ್ಕಾಗಿ ವೈಸರಾಯ್ ಅಗಳು ತೋಡಿಸಿದನು. ಅಗಳಿನ ಕೆಲಸ ಮಧ್ಯರಾತ್ರಿ ಒಂದು ಗಂಟೆಗಾಗುವಾಗ ಪೂರ್ಣವಾಯಿತು.[೨೦]

ಮರುದಿನ ಉಳ್ಳಾಲದ ಮೇಲೆ ಆಕ್ರಮಣ ಮಾಡಬೇಕೆಂದು ಮೊದಲು ನಿರ್ಧರಿಸಿದ್ದ ವೈಸರಾಯ್ ಬಳಿಕ ಅದನ್ನು ಮುಂದಿನ ದಿನಕ್ಕೆ ಮುಂದೂಡಿದನು. ಇದರಿಂದಾಗಿ ಹಿಂದಿನ ರಾತ್ರಿಯ ಸೋಲಿನಿಂದ ಅವಮಾನಿತರಾಗಿ ಸೇಡು ತೀರಿಸಲು ಹಾತೊರೆಯುತ್ತಿದ್ದ ಪೋರ್ಚುಗೀಸ್ ಸೈನಿಕರಿಗೆ ನಿರಾಶೆಯಾಯಿತು. ಸುಮಾರು ೨೦೦ಕ್ಕಿಂತಲೂ ಅಧಿಕವಿದ್ದ ಈ ಉತ್ಸಾಹಿ ಸೈನಿಕರು ವೈಸರಾಯ್ ಆದೇಶಕ್ಕೆ ಕಾಯದೇ ದಾಳಿಯನ್ನಾರಂಭಿಸಿದರು. ಕೊನೆಗೆ ೧೫೬೮ರ ಜನವರಿ

೫ರಂದೇ ಉಳ್ಳಾಲದ ವಿರುದ್ಧದ ಯುದ್ಧದಲ್ಲಿ ವೈಸರಾಯ್ ಇಡೀ ಸೈನ್ಯವನ್ನೇ ತೊಡಗಿಸಬೇಕಾಯಿತು.

ಸುಮಾರು ೬೦೦೦ದಷ್ಟಿದ್ದ ಅಬ್ಬಕ್ಕನ ಸೈನಿಕರಲ್ಲಿ ಹಲವು ಸೈನಿಕರನ್ನು ಕೊಂದು ಪೋರ್ಚುಗೀಸ್ ಸೈನಿಕರು ನಗರ ಹಾಗೂ ಮಾರುಕಟ್ಟೆ ಪ್ರದೇಶಗಳನ್ನು ಪ್ರವೇಶಿಸಿದರು. ಅರಮನೆಗೆ ಬೆಂಕಿ ಹಚ್ಚಿದರು. ನಗರದ ಕೆಲಭಾಗಗಳಲ್ಲೂ ಬೆಂಕಿ ಹಚ್ಚಿದರು. ಹಲವಾರು ಮರಗಳು ಹಾಗೂ ತೆಂಗಿನ ಮರಗಳನ್ನು ಕಡಿದುಹಾಕಿದರು. ರಾಣಿ ತಪ್ಪಿಸಿಕೊಂಡು ಒಂದು ಬೆಟ್ಟದ ತುದಿಗೆ ಹೋದಳು ಎಂದು ಹೇಳಲಾಗುತ್ತದೆ. ಇವೆಲ್ಲ ಘಟನಾವಳಿಗಳು ಸುಮಾರು ಅರ್ಧ ದಿನಕ್ಕಿಂತ ಸ್ವಲ್ಪ ಹೆಚ್ಚು ಅವಧಿಯಲ್ಲಿ ನಡೆದವು. ಪೋರ್ಚುಗೀಸರು ಹಡಗಿಗೆ ಹಿಂದಿರುಗುತ್ತಿದ್ದಾಗ ಅವರ ಮೇಲೆ ಉಳ್ಳಾಲದ ಸೈನಿಕರು ಮತ್ತೊಮ್ಮೆ ಆಕ್ರಮಣ ಮಾಡಿದರಾದರೂ ಅದರಿಂದ ಅವರಿಗೆ ಹೆಚ್ಚೇನೂ ಹಾನಿಯಾಗಲಿಲ್ಲ. ಅವರ ಗಣ್ಯನೊಬ್ಬ ಮಾತ್ರ ಮೃತಪಟ್ಟ. ಆ ದಿನದ ಯುದ್ಧದಲ್ಲಿ ಪೋರ್ಚುಗೀಸರು ೩೫ ಅಥವಾ ೩೬ ಸೈನಿಕರನ್ನು ಕಳೆದುಕೊಂಡರು. ಆದರೆ ರಾಣಿಯ ಕಡೆಯ ೩೦೦ಕ್ಕಿಂತಲೂ ಹೆಚ್ಚು ಸೈನಿಕರು ಮೃತರಾದರು.[೨೧]

ಈ ಯಶಸ್ವಿ ದಾಳಿಯ ಬಳಿಕ ಉಳ್ಳಾಲದಲ್ಲಿ ನದಿಯ ದಕ್ಷಿಣ ದಂಡೆಯ ಬಳಿ ಕೋಟೆ ಕಟ್ಟುವ ಬಗ್ಗೆ ವೈಸರಾಯ್ ಪರಿಶೀಲನೆ ನಡೆಸಿದನು. ತಮಗೆ ಸರಿಯಾಗಿ ಕಪ್ಪ ನೀಡದ ಹಾಗೂ ಮಲಬಾರಿನಲ್ಲಿ ತಮ್ಮ ಶತ್ರುಗಳಿಗೆ ಸಹಕರಿಸುತ್ತಿದ್ದ ಎರಡನೇ ಅಬ್ಬಕ್ಕ ದೇವಿಯ ವಿರುದ್ಧ ತಮ್ಮ ಹಿತಾಸಕ್ತಿಯನ್ನು ಕಾಪಾಡಲು ಪೋರ್ಚುಗೀಸರಿಗೆ ಇಲ್ಲಿ ಕೋಟೆಯ ಅಗತ್ಯವಿತ್ತು. ಈ ಅಂಶಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ವೈಸರಾಯ್ ಅಂಟಾವೊ ಡಿ ನೊರೊನ್ಹಾ (Antao de Noronha) ೩೦೦೦ ಸೈನಿಕರಿದ್ದ ನೌಕಾಪಡೆಯೊಂದಿಗೆ ಬಂದಿದ್ದನು.

ಆದರೆ ನೇತ್ರಾವತಿ ನದಿ ಸಮುದ್ರಕ್ಕೆ ಸೇರುವಲ್ಲಿ ಅದರ ದಕ್ಷಿಣ ದಂಡೆಯಲ್ಲಿ ಮೊದಲೇ ರಾಣಿ ಸುಮಾರು ೧೦ - ೧೧ ಮಾರುಗಳಷ್ಟು ಅಗಲವಾದ ಗೋಡೆಯನ್ನು ಕಟ್ಟಿಸಿದ್ದಳು. ಅದರ ಮೇಲೆ ಕೆಲವು ಕಾವಲು ಗೋಪುರಗಳಿದ್ದವು. ಈ ಕಾವಲು ಗೋಪುರಗಳಲ್ಲಿ ಫಿರಂಗಿಗಳನ್ನು ಇಡಲಾಗಿತ್ತು. ಅವಳು ಈ ಕೋಟೆಯನ್ನು ಕಾಯಲು ೫೦೦ರಷ್ಟು ಸೈನಿಕರನ್ನು ನಿಯೋಜಿಸಿದ್ದಳು. ನದಿಯ ದಂಡೆಯ ಉದ್ದಕ್ಕೂ ಉಳ್ಳಾಲದವರೆಗೂ ಅವಳು ರಕ್ಷಣೆಗಾಗಿ ಸುಮಾರು ೧೧೦೦೦ ಸೈನಿಕರನ್ನು ಇಟ್ಟಿದ್ದಳು. ಹೀಗಾಗಿ ಆ ಸ್ಥಳ ಅಷ್ಟೇನೂ ಪ್ರಶಸ್ತವಲ್ಲವೆಂದು ಮನಗಂಡ ವೈಸರಾಯ್ ನದಿ ದಾಟಿ ಉತ್ತರ ದಂಡೆಯ ಮಂಗಳೂರಿನ ಕಡೆ ಹೋದನು. ಅಲ್ಲಿ ಕೊನೆಗೆ ಬಂಗರಸನ ಸಹಕಾರದಿಂದ ೧೫೬೮ರಲ್ಲಿ ಕೋಟೆಯನ್ನು ನಿರ್ಮಿಸಿದನು.[೨೨] ಮಂಗಳೂರಿನಲ್ಲಿ ವೈಸರಾಯನನ್ನು ಭೇಟಿ ಮಾಡಿದ ಬಂಗರಾಜನು ಕೋಟೆ ಕಟ್ಟಲು ಬೇಕಾದ ಸಾಮಗ್ರಿಗಳನ್ನು ಹಾಗೂ ಕೆಲಸಗಾರರನ್ನು ಒದಗಿಸುವ ಭರವಸೆ ನೀಡಿದ್ದನು. ಪೋರ್ಚುಗೀಸರ ಈ ಕೋಟೆಯನ್ನು ಅಗತ್ಯ ಬಿದ್ದಾಗ ರಕ್ಷಿಸಲು ಎಲ್ಲ ರೀತಿಯಿಂದಲೂ ಬದ್ಧ ಎಂಬ ಒಪ್ಪಂದವನ್ನೂ ಬಂಗರಾಜನು ಮಾಡಿಕೊಂಡನು.[೨೩] ಶಾಸ್ತ್ರಿಯವರ ಅಭಿಪ್ರಾಯದ ಪ್ರಕಾರ, ತನಗೆ ವಿಧೇಯತೆಯನ್ನು ತೋರಿಸದ ಮುಸ್ಲಿಮರ ವಿರುದ್ಧ ಸೇಡು ತೀರಿಸಲಿಕ್ಕಾಗಿ ಬಂಗರಾಜನು ಪೋರ್ಚುಗೀಸರಿಗೆ ಕೋಟೆ ಕಟ್ಟಲು ಸ್ಥಳಾವಕಾಶ ನೀಡಿದನು.[೨೪] ಮಂಗಳೂರಿನ ಕೋಟೆಯ ನಿರ್ಮಾಣವಾದ ತಕ್ಷಣ ಎರಡನೇ ಅಬ್ಬಕ್ಕ ದೇವಿ ಮತ್ತು ಬಂಗರಾಜ ಪರಸ್ಪರ ಶತ್ರುಗಳಾದರು. ಮಂಗಳೂರಿನಲ್ಲಿ ಯುದ್ಧದ ವಾತಾವರಣ ಇದ್ದರೆ ಅದು ಪೋರ್ಚುಗೀಸರ ವ್ಯಾಪಾರದ ಹಿತಾಸಕ್ತಿಗೆ ಪೂರಕವಲ್ಲವೆಂದು ಮನಗಂಡ ವೈಸರಾಯ್ (Luiz de Ataide) ಲೂಯಿ ಡಿ ಅತ್ತಾದೆ ೧೫೭೦ರಲ್ಲಿ ಇವರಿಬ್ಬರ ನಡುವೆ ರಾಜಿಯಾಗುವಂತೆ ಮಾಡಿದನು. ಅವನ ಪ್ರಯತ್ನ ಫಲ ನೀಡಿತು. ಎರಡೂ ಸಂಸ್ಥಾನಗಳೂ ಸ್ನೇಹ ಸಂಬಂಧವನ್ನು ಉಳಿಸಿಕೊಳ್ಳಲು ತೀರ್ಮಾನಿಸಿದವು. ಆದಾಗ್ಯೂ ೧೫೭೦ರ ಬಳಿಕ ಕೂಡ ಇವರಿಬ್ಬರೂ ಪರಸ್ಪರ ಜಗಳಾಡಿಕೊಂಡ ಸನ್ನಿವೇಶಗಳು ನಿರ್ಮಾಣವಾದುದಿದೆ.[೨೫]

ಬಂಗರಾಜನ ಜತೆ ಸ್ನೇಹದಿಂದ ಇರುವುದಾಗಿ ೧೫೭೦ರಲ್ಲಿ ಎರಡನೆ ಅಬ್ಬಕ್ಕದೇವಿ ಒಪ್ಪಿಕೊಂಡಿದ್ದಳಾದರೂ ಪೋರ್ಚುಗೀಸರ ಬಗ್ಗೆ ಅವಳು ಗುಪ್ತ ಶತ್ರುಭಾವವನ್ನು ಉಳಿಸಿಕೊಂಡೇ ಇದ್ದಳು. ಪೋರ್ಚುಗೀಸರು ಅವಳ ಮೇಲೆ ವಿಧಿಸಿದ್ದ ಕಪ್ಪ ಕೊಡುವುದನ್ನು ತಪ್ಪಿಸಲು ಅವಕಾಶಕ್ಕಾಗಿ ಅವಳು ಕಾಯುತ್ತಿದ್ದಳು. ಹೀಗಾಗಿ, ಬಿಜಾಪುರದ ಆದಿಲ್ ಶಾ, ಅಹಮದ್ ನಗರದ ಸುಲ್ತಾನ ಮತ್ತು ಜಾಮೊರಿನ್ ಇವರು ಒಟ್ಟು ಸೇರಿ ಮಾಡಿಕೊಂಡ ಒಕ್ಕೂಟದಿಂದಾಗಿ ಪೋರ್ಚುಗೀಸರು ತೊಂದರೆಯಲ್ಲಿದ್ದಾಗ ಅದರ ಪ್ರಯೋಜನವನ್ನು ಎರಡನೇ ಅಬ್ಬಕ್ಕ ದೇವಿ ಪಡೆದಳು. ಕಲ್ಲಿಕೋಟೆಯ ಜಾಮೋರಿನ್ ಕಡೆಯ ಅಡ್ಮಿರಲ್ ಮಂಗಳೂರಿನ ಪೋರ್ಚುಗೀಸರ ಕೋಟೆಯನ್ನು ಆಕ್ರಮಿಸುವಂತೆ ಅವಳು ಪ್ರೇರೇಪಿಸಿದಳು. ಈ ದಾಳಿಯಲ್ಲಿ ಕಲ್ಲಿಕೋಟೆಯವರು ಸಾಕಷ್ಟು ಯಶಸ್ವಿಯೂ ಆದರು.[೨೬] ಮಂಗಳೂರಿನ ಪೋರ್ಚುಗೀಸರ ಕೋಟೆಗೆ ವಿರುದ್ಧವಾಗಿ ಎಂಬಂತೆ ಉಳ್ಳಾಲದಲ್ಲಿಯೂ ೧೫೯೪ರ ಹೊತ್ತಿಗಾಗುವಾಗ ಕೋಟೆ

ಯೊಂದನ್ನು ಕಟ್ಟಲಾಗಿತ್ತು.[೨೭]

ಬಿ.ಎಸ್. ಶಾಸ್ತ್ರಿಪ್ರಕಾರ, ಇಟಲಿಯ ಪ್ರವಾಸಿ (Pietro Della Valle) ಪಿಟ್ರೋ ಡೆಲ್ಲಾವಲ್ಲೆಯು ೧೬೨೩ರಲ್ಲಿ ಭೇಟಿಯಾದ ರಾಣಿ ಮತ್ತು ಎರಡನೇ ಅಬ್ಬಕ್ಕ ದೇವಿ ಇವರಿಬ್ಬರೂ ಬೇರೆ ಬೇರೆಯೇ ವ್ಯಕ್ತಿಗಳು. ಇಬ್ಬರೂ ಒಬ್ಬಳೇ ರಾಣಿಯಾಗಿರುತ್ತಿದ್ದರೆ ಸುಮಾರು ೭೦ ವರ್ಷ ಪ್ರಾಯದ ರಾಣಿಯನ್ನು ಡೆಲ್ಲಾವೆಲ್ಲೆ ಭೇಟಿಯಾಗಬೇಕಿತ್ತು. ಆದರೆ, ಆತ ಭೇಟಿ ಮಾಡಿದ ಬುಕ್ಕದೇವಿ ಚೌಟರ್ ರಾಣಿಗೆ ಸುಮಾರು ೪೦ ವರ್ಷ ಪ್ರಾಯವಾಗಿತ್ತು. ವಾಸ್ತವವಾಗಿ, ೧೫೬೮ ಮತ್ತು ೧೬೨೩ರಲ್ಲಿ ಆಳಿದ ರಾಣಿಯರ ಮಧ್ಯೆ ಉಳ್ಳಾಲವನ್ನು ಒಬ್ಬ ರಾಜ ಆಳಿರಬೇಕು.[೨೮] ಐಗಳ್ ಸೂಚಿಸುವ ವಂಶಾವಳಿ ಪ್ರಕಾರ ಎರಡನೇ ಅಬ್ಬಕ್ಕ ದೇವಿಯ ಬಳಿಕ ತಿರುಮಲದೇವಿ (೧೫೮೬- ೧೬೦೬) ಮತ್ತು ಒಂದನೇ ಚಂದಶೇಖರ ಚಿಕ್ಕರಾಯ (೧೬೦೬-೧೬೨೮) ಪಟ್ಟಕ್ಕೆ ಬಂದರು.[೨೯] ಶಾಸ್ತ್ರಿಯವರ ಅಭಿಪ್ರಾಯವನ್ನು ಒಪ್ಪುವುದಾದರೆ, ಹಾಗೂ ಎರಡನೇ ಅಬ್ಬಕ್ಕ ದೇವಿ ೧೫೮೨ರ ವರೆಗೆ ಮಾತ್ರ ಆಳಿದ್ದಾದರೆ, ಡೆಲ್ಲಾ ವೆಲ್ಲೆಯು ಆಕೆಯನ್ನು ಭೇಟಿ ಮಾಡಿದ್ದ ಎಂಬ ಹೇಳಿಕೆ ಅಥವಾ ನಂಬಿಕೆಯು ನಿಜವಾಗಿರಲು ಸಾಧ್ಯವಿಲ್ಲ.[೩೦]

ಎರಡನೇ ಅಬ್ಬಕ್ಕ ದೇವಿಯು ಎರಡನೇ ಲಕ್ಷ್ಮಪ್ಪರಸ ಬಂಗರಾಯನನ್ನು ಹಾಗೆಯೇ ಲಕ್ಷ್ಮಪ್ಪರಸನ ಮರಣಾನಂತರ ಆತನ ಅಳಿಯ (nephew) ಕಾಮಿರಾಯನ ಜತೆ ಅವಳಿಗೆ ಮನಸ್ತಾಪವುಂಟಾಯಿತು ಎಂದೂ ಹೇಳಲಾಗಿದೆ. ಅಬ್ಬಕ್ಕ ದೇವಿಯ ಮೇಲಿನ ದ್ವೇಷದಿಂದಾಗಿ ಕಾಮಿರಾಯ ಪೋರ್ಚುಗೀಸರ ಜತೆ ಹೊಂದಾಣಿಕೆ ಮಾಡಿಕೊಳ್ಳುವಂತಾಯಿತು ಹಾಗೂ ಪೋರ್ಚುಗೀಸರು ಅಬ್ಬಕ್ಕನ ಆಡಳಿತ ವ್ಯಾಪ್ತಿಯ ಪ್ರದೇಶಗಳಿಗೆ ಪದೇ ಪದೇ ದಾಳಿ ಮಾಡಿ ಕಪ್ಪದ ಹೊರೆಯನ್ನು ಹೇರುವಂತಾಯಿತು.[೩೧]

ಪೆಟ್ರೊ ಡೆಲ್ಲಾ ವಲ್ಲೆ ಉಲ್ಲೇಖಿಸಿರುವ ಉಳ್ಳಾಲದ ರಾಣಿ ಹಾಗೂ ಬಂಗರಾಜನ ಈ ವಿವಾಹವು ೧೫೬೮ರ (ಉಳ್ಳಾಲ ಮತ್ತು ಪೋರ್ಚುಗೀಸರ ನಡುವಿನ) ಯುದ್ಧದ ಬಳಿಕ ನಡೆದಿರಬೇಕು; ಸ್ನೇಹ ಮತ್ತು ಶಾಂತಿಯನ್ನು ಗಟ್ಟಿ ನೆಲೆಯಲ್ಲಿ ಸ್ಥಾಪನೆಗೊಳಿಸುವುದು ಈ ವಿವಾಹದ ಉದ್ದೇಶವಾಗಿದ್ದಿರಬಹುದು ಎಂದು ಹೆನ್ರಿ ಹೆರಾಸ್ ಸೂಚಿಸಿದ್ದಾರೆ.[೩೨] ಈ ಅಭಿಪ್ರಾಯವನ್ನು ಒಪ್ಪಲು ಸಾಧ್ಯವಿಲ್ಲದಿದ್ದರೂ, ಈ ವಿವಾಹ ಸಂಬಂಧ ಏರ್ಪಟ್ಟ ನಿರ್ದಿಷ್ಟ ವರ್ಷವನ್ನು ಇನ್ನಷ್ಟೇ ಕಂಡುಕೊಳ್ಳಬೇಕಾಗಿದೆ.

ಚೌಟರ ಚರಿತ್ರೆಯಲ್ಲಿ, ಅವರ ಸಮಕಾಲೀನರ ಜೊತೆ ಹಾಗೂ ಪೋರ್ಚುಗೀಸರ ಜತೆಗಿನ ಚೌಟರ ಸಂಬಂಧದ ಕುರಿತಾದ ಚರಿತ್ರೆಯಲ್ಲಿ ಹಲವು ತೆರಪುಗಳಿವೆ (gaps) ಎಂಬುದನ್ನು ಮೇಲಿನ ವಿವರಗಳು ತೋರಿಸುತ್ತವೆ. ಮೊದಲನೆಯದಾಗಿ, ವಿಭಿನ್ನ ಅರಸರು ಹಾಗೂ ಅವರ ಆಳ್ವಿಕೆಯ ಕಾಲಾವಧಿಗಳ ಬಗ್ಗೆ ಸಾಕಷ್ಟು ಮಾಹಿತಿಗಳಿಲ್ಲ. ಎರಡನೆಯದಾಗಿ, ಚೌಟರು ಹಾಗೂ ಪೋರ್ಚುಗೀಸರ ನಡುವಿನ ಸಂಬಂಧ ಕೇವಲ ಪಾರಸ್ಪರಿಕವಾದುದಷ್ಟೇ ಆಗಿರಲಿಲ್ಲ. ಅದರೆಡೆಯಲ್ಲಿ ಕಲ್ಲಿಕೋಟೆಯ ಜಾಮೊರಿನ್ ಹಾಗೂ ಬಂಗವಾಡಿಯ ಬಂಗರು ಆಗಾಗ ಸೇರಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲದೆ, ಆ ಕಾಲಘಟ್ಟದಲ್ಲಿ ಭಾರತದ ಹಾಗೂ ಕರ್ನಾಟಕದ ವಿವಿಧ ರಾಜರುಗಳು ಅಧಿಕಾರಕ್ಕಾಗಿ ಸ್ಪರ್ಧೆಯಲ್ಲಿದ್ದರು. ಆಗ ರಾಷ್ಟ್ರೀಯ ಭಾವನೆ ಎಂಬುದು ಇಲ್ಲದೇ ಇದ್ದುದರಿಂದ ಅವರಾರೂ ಒಗ್ಗಟ್ಟಾಗಿರಲಿಲ್ಲ.

ಅವರು ತಮ್ಮ ತಮ್ಮೊಳಗೇ ಜಗಳವಾಡಲು ಹಿಂಜರಿಯುತ್ತಿರಲಿಲ್ಲ ಹಾಗೂ ಎಷ್ಟೋ ಬಾರಿ ತಮ್ಮ ನೆರೆಯ ರಾಜರುಗಳ ವಿರುದ್ಧ ಹೋರಾಡಲಿಕ್ಕಾಗಿ ಪೋರ್ಚುಗೀಸರ ಜತೆ ಸೇರಿಕೊಳ್ಳುತ್ತಿದ್ದರು. ಹೀಗೆ, ಸ್ವ-ಹಿತಾಸಕ್ತಿ ಮುಖ್ಯವಾಗಿತ್ತು ಹೊರತು ರಾಷ್ಟ್ರದ ಹಿತಾಸಕ್ತಿಯಲ್ಲ. ಈ ಸ್ಥಿತಿಯನ್ನು ಯುರೋಪಿನ ಶಕ್ತಿಗಳು ಭಾರತವನ್ನು ಗೆಲ್ಲಲು ಹಾಗೂ ದಮನಿಸಲು ಚೆನ್ನಾಗಿ ಬಳಸಿಕೊಂಡರು. ಮೂಲ ಆಕರಗಳನ್ನು ಪರಿಶೀಲಿಸಿ, ಮಧ್ಯಕಾಲೀನ ಭಾರತದ ಚರಿತ್ರೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಉಳ್ಳಾಲದ ಚೌಟರ ಚರಿತ್ರೆಯನ್ನು ಪುನರ್ ರಚಿಸಬೇಕಾದುದು ಇಂದಿನ ಅಗತ್ಯ.

## ಟಿಪ್ಪಣಿಗಳು ಹಾಗೂ ಉಲ್ಲೇಖಗಳು

ಪೋರ್ಚುಗೀಸ್ ದಾಖಲೆಗಳು ಸಾಮಾನ್ಯವಾಗಿ ಚೌಟರು, ಬಂಗರು ಎಂದು ಮುಂತಾಗಿ ವಂಶಗಳ ಅಥವಾ ಮನೆತನದ ಹೆಸರುಗಳನ್ನು ಉಲ್ಲೇಖಿಸುತ್ತವೆ ಹೊರತು ವ್ಯಕ್ತಿಗಳ ಹೆಸರನ್ನಲ್ಲ. ಬಹಳ ವಿರಳವಾಗಿ ಅಬ್ಬಕ್ಕ ದೇವಿಯಂಥ ಹೆಸರುಗಳು ಉಲ್ಲೇಖಿಸಲ್ಪಟ್ಟಿವೆ. ಉಳ್ಳಾಲದ ರಾಜ ರಾಣಿಯರ ವಂಶಾವಳಿಗಳ ವಿವರಕ್ಕಾಗಿ ಈ ಲೇಖನವು, ದಕ್ಷಿಣಕನ್ನಡದ ಇತಿಹಾಸಕಾರರಾದ ಗಣಪತಿರಾವ್ ಐಗಳ್ ಹಾಗೂ ಪಿ. ಗುರುರಾಜ ಭಟ್ ನೀಡಿರುವ ವಿವರಗಳನ್ನು ಅವಲಂಬಿಸಿದೆ.

ಎರಡನೇ ಅಬ್ಬಕ್ಕದೇವಿ ೧೫೪೪ರಿಂದ ೧೫೮೨ರ ವರೆಗೆ ಆಳಿದಳು ಎಂದು ಈ ಲೇಖಕರು ಹೇಳಿರುವುದರಿಂದ ಹಾಗೂ ಈ ಅವಧಿಯಲ್ಲಿ ಪೋರ್ಚುಗೀಸರು ಮತ್ತು ಉಳ್ಳಾಲದ ನಡುವೆ ಯುದ್ಧ ನಡೆಯಿತೆಂದು ಜಾರ್ಜ್ ಎಂ. ಮೊರಾಸ್ ಮತ್ತು ಬಿ.ಎಸ್. ಶಾಸ್ತ್ರಿಯವರಂಥ ಇತಿಹಾಸಕಾರರು ಹೇಳುವುದರಿಂದ, ಪೋರ್ಚುಗೀಸರ ಜತೆ ಭೀಕರ ಯುದ್ಧವನ್ನು ಮಾಡಿದುದು ಎರಡನೇ ಅಬ್ಬಕ್ಕದೇವಿ ಎಂದು ನಾವು ಊಹಿಸಬಹುದು. ಅಂಥ ಯುದ್ಧಗಳು ೧೫೩೦ರ ದಶಕದಲ್ಲಿ ಹಾಗೂ ೧೫೫೦ರ ದಶಕದಲ್ಲಿ ನಡೆದ ಬಗ್ಗೆ ಉಲ್ಲೇಖಗಳಿವೆಯಾದರೂ ಆ ಬಗ್ಗೆ ೧೫೬೮ರ ಯುದ್ಧದ ಕುರಿತಾಗಿ ನೀಡಿದಂತೆ ಮಾಹಿತಿಗಳನ್ನು ಇತಿಹಾಸಕಾರರು ನೀಡುವುದಿಲ್ಲ. ಆದ್ದರಿಂದ ೧೫೬೮ರ ಯುದ್ಧವು ಹಿಂದಿನವುಗಳಿಗೆ ಹೋಲಿಸಿದರೆ ಹೆಚ್ಚು ಗಣನೀಯವಾದುದಾಗಿರಬೇಕು ಮತ್ತು ಈ ಕಾರಣದಿಂದಾಗಿಯೇ ಎರಡನೇ ಅಬ್ಬಕ್ಕದೇವಿಯನ್ನು ಉಳ್ಳಾಲದ ರಾಜ ರಾಣಿಯರ ಪೈಕಿ ಅತಿ ಹೆಚ್ಚು ಧೈರ್ಯಶಾಲಿ ಎಂದು ಪರಿಗಣಿಸಿರಬೇಕು.

ಮೂಲ ಪೋರ್ಚುಗೀಸ್ ದಾಖಲೆಗಳನ್ನು ಪರಿಶೀಲಿಸಲು ಈ ಲೇಖಕ ಪ್ರಯತ್ನಿಸಿರುವನಾದರೂ ಫಲ ದೊರೆಯಲಿಲ್ಲ. ೧೫೬೦ರಿಂದ ೧೬೦೧ರ ವರೆಗಿನ ವಿವರಗಳುಳ್ಳ Livros das Moncoes do Reino (Monsoon Series)ನ ಮೊದಲ ಸಂಪುಟದಲ್ಲಿ ಕೆಲವು ಉಲ್ಲೇಖಗಳಿರಬಹುದಾದರೂ ಅದು ಗೋವಾದ ಪ್ರಾಚ್ಯ ಸಂಗ್ರಹಾಲಯದಲ್ಲಿ (Goa Archives) ಲಭ್ಯವಿಲ್ಲ; ಅದನ್ನು ಲಿಸ್ಬನ್‌ಗೆ ತೆಗೆದುಕೊಂಡು ಹೋಗಲಾಗಿದೆ ಎಂದು ಹೇಳಲಾಗಿದೆ.

**ಕನ್ನಡಕ್ಕೆ ಡಾ. ಅಜಕ್ಕಳ ಗಿರೀಶ ಭಟ್**

## ಪರಾಮರ್ಶನ ಗ್ರಂಥಗಳು


1. P. Gururaja Bhat, Studies in Tuluva History and Culture, Manipal. 1975. p. 68 (hereafter Bhat); B.A. Saletore, *Ancient Karnataka Vol. 1, History of Tuluva*, Oriental Book Agency, Poona, 1936, p. 408; The Chautas shifted their capital to Puttige during the reign of Chennaraya 1 (1179-1219) and later on to Mudabidire in the 17th century. See Bhat, Op. Cit., p. 71; The Kaifiyats of Chautas also provide us some useful details about this feudatory ruling family. See K, Kushalappa Gowda and K. Chinnappa Gowda (eds), *Dakshina Kannada Jilleya Kaifiyattugalu*, (in Kannada), Shree Dharmasthala Manjunatheshwara Pustaka Prakashana Male, Ujire, 1983, pp. 12-18, and 119-35.
2. Saletore, p. 349; Here Saletore gave the names of twelve princesses among which Cauta (Chouta) also appears.
3. *Ibid*, p. 408.
4. Bhat, p. 68.
5. M. Ganapathi Rao Aigal (hereafter Aigal), *Dakshina Kannada Jilleya Prachina Itihasa*, Padekallu Vishnu Bhat (ed.), in Kannada, Rashtrakavi Govinda Pai Samshodhana Kendra, Udupi, 2004, pp. 189-204; Bhat, pp. 75-76.
6. Bhat, pp. 75-76
7. Aigal, pp. 189-204.
8. K.V. Ramesh, A History of South Kanara (From the earliest times to the fall of Vijayanagara), Karnatak University, Dharwar, 1970, p. 159.
9. K.V. Ramesh and M.J. Sharma, Tulunadina Arasu Manetanagalu Mattu Dharmasamanvaya, in Kannada, Shree Dharmasthala Manjunatheshwara Pustaka Prakashanamale, Ujire. 1985,

p. 75 and p. 86. However. K.G. Vasantha Madhava has informed the present author that he does not accept this position.

10. See http://en.wikipedia.org/wiki/Abbakka_Rni
11. B. Vaman Rao, Rani Abbakka, Historical Kannada Drama, Mangalore, 2007.
12. Bhat, pp. 73-74.
13. B.S. Shastry, Studies in Indo-Portuguese History. IBH Prakashana Printery, Bangalore, 1981, p. 48 (hereafter Studies); Shastry, Goa-Kanara Portuguese Relations 1498-1763, Charles J. Borges (ed.), Concept Publishing Company, New Delhi, 2000, p.l. (hereafter Goa-Kanara).
14. Shastry, Studeis, p. 201 and p. 203.
15. Bhat, p. 54; Manuel e Faria e Sousa, Asia Portuguesa, 6 volumes, Porto, 1945-47, Vol. III. Porto, 1946, p. 267; George M. Moraes, Mangalore A Historical Sketch, (Asian ¿á Educational Services, New Delhi, reprint 1991, pp. 56.
16. Shastry, Goa-Kanara, p. 78, and p. 81.
17. Bhat, p. 74; Moraes syas that this attack took place in the year 1555 and the treaty was signed due to the intervention of the Zamorin of Calicut. See George M. Moraes, p. 7.
18. George M. Moraes, p. 7.
19. Ibid, p. 8.
20. Shastry, Goa-Kanara, pp. 116-117; Diogo de Couto, Da Asia, Decadas IV-XII, Lisbon, 1778-1788, Vol. VII, pp. 113-22.
21. Ibid, pp. 117-18.; George M. Moraes, pp. 8-121; Diogo de Couto, Da Asia, Decadas, VIII, pp. 123-26.
22. Ibid, p. 116 and p. 285; Diogo de Couto, Da Asia, Decadas, VIII. pp. 111-12.
23. Ibid, p. 75 and p. 82; Diogo de Couto, Da Asia, Decadas, VIII. pp. 127.
24. Ibid, p. 82; Paulo De Trindade, Conquista Espiritual do Oriente, 3 volumes, Lisbon, 1961-67, Vol. II, pp. 229-30.
25. Ibid, p. 118; Manuel de Faria e Sousa, Asia Portuguesa. Vol. IV, pp. 64-5.
26. Ibid, pp. 118-19; George m. Moraes, p. 12.
27. George M. Moraes, p. 13.
28. Shastry, Goa-Kanara, p. 118.
29. Aigal, pp. 197-98.
30. Neri Harish Hebbar wrote that Della Valle visited Mangalore towards the end of 16th century, and he met Abbakkadevi. See Neri Harish Hebbar, "The Intrepid Queen Rani Abbakka Devi of Ullal", in http://www/boloji.com/history/028.htm.
31. Bhat, p. 71; Aigal, pp. 182-83.
32. Shastry, Goa-Kanara, p. 118; Henry Heras, The Aravidul Dynasty of Vijayanagara, Vol. I, Mardras, 1927, 298; Pietro Della Valle, The Travels of Pietro Della Valle in India, 2 vols. Translated by Edward Grey, II. London, 1892, p. 313. If Lakshmapparasa Bangaraya died in 1556 fighting against the Ajilas of Venur (see Aigal, p. 183(, how could Abbakkadevi II marry him after 1569.